ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಿದ ದಿನಾಂಕ**: 29.02.2024.**

**ಪಾಟೀ ಸವಾಲು - ವಾದಿ ಪರ ಶ್ರೀ.ಬಿ.ಎಂ.ಬಿ. ವಕೀಲರಿಂದಃ**

4) ನಾನು ವಿದ್ಯಾಭ್ಯಾಸ ಮಾಡಿಲ್ಲ. ನಾನು ಸಹಿಯನ್ನು ಕನ್ನಡದಲ್ಲಿ ಮಾಡುತ್ತೇನೆ. ನನಗೆ ಕನ್ನಡದಲ್ಲಿರುವುದನ್ನು ಓದಲು ಬರುವುದಿಲ್ಲ. ದಾವೆಯ ಆಸ್ತಿ ಗೊಬ್ಬರಗುಂಡಿ ಗ್ರಾಮದಲ್ಲಿ ಇರುತ್ತದೆ. ಅದರ ವಿಸ್ತೀರ್ಣ 1 ಎಕರೆ 17 ಗುಂಟೆ ಇರುತ್ತದೆ. ಅದರ ಸರ್ವೆ ನಂ.60/3 ಇರುತ್ತದೆ. ದಾವಾ ಸ್ವತ್ತಿನ ಪೂರ್ವಕ್ಕೆಃ ಚಿಕ್ಕಮಣ್ಣನವರ ನಂಜುಂಡಪ್ಪರವರು ಇದ್ದಾರೆ, ಪಶ್ಚಿಮಕ್ಕೆಃ ಚಿಕ್ಕಮುನಿಯಪ್ಪನವರ ಜಮೀನು, ಉತ್ತರ ಮತ್ತು ದಕ್ಷಿಣ ದಿಕ್ಕುಗಳಲ್ಲಿ ಖರಾಬು ಕಾಲುವೆ ಇರುತ್ತವೆ. ನಾನು ಪ್ರತಿವಾದ ಪತ್ರ ಸಲ್ಲಿಸಲು ಮಾಹಿತಿ ನೀಡಿದಾಗ ನನ್ನ ವಕೀಲರಾಗಿ ಕೃಷ್ಣಸ್ವಾಮಿಯವರು ಇದ್ದರು. ನನ್ನ ತಾತನ ಹೆಸರು ಚಿಕ್ಕಕಾಕಪ್ಪ ಎಂದರೆ ಸರಿ. ನನ್ನ ತಾತ ಯಾವಾಗ ತೀರಿಕೊಂಡರು ಎಂದು ನನಗೆ ಗೊತ್ತಿಲ್ಲ. ಚಿಕ್ಕಕಾಕಪ್ಪನಿಗೆ ನಾಲ್ಕು ಜನ ಮಕ್ಕಳು ಇದ್ದರು. ಚಿಕ್ಕಕಾಕಪ್ಪನ ಮಕ್ಕಳಾದ ಮುನಿವೆಂಕಟಪ್ಪ, ಪಿಳ್ಳಪ್ಪ, ಲಕ್ಷ್ಮಯ್ಯ ಮತ್ತು ರಾಮಯ್ಯ ಎಲ್ಲರೂ ಈಗ ಮೃತಪಟ್ಟಿದ್ದಾರೆ. ನನ್ನ ತಂದೆ ಪಿಳ್ಳಪ್ಪ ಚಿಕ್ಕಕಾಕಪ್ಪನಿಗೆ ಎರಡನೇ ಮಗನೆಂದರೆ ಸರಿ. ನನ್ನ ತಂದೆ ಸುಮಾರು 30 ವರ್ಷಗಳ ಹಿಂದೆ ಮೃತಪಟ್ಟಿದ್ದಾರೆ. ಮುನಿವೆಂಕಟಪ್ಪನ ಮೊದಲನೇ ಮಗ ಕೃಷ್ಣಪ್ಪ ಚಿಂತಾಮಣಿಯಲ್ಲಿ ವಾಸವಿದ್ದಾರೆ ಎಂದರೆ ಹೌದು, ಈಗ ಕೃಷ್ಣಪ್ಪ ಕೂಡ ತೀರಿಕೊಂಡಿದ್ದಾರೆ. ನನ್ನ ತಂದೆ ಪಿಳ್ಳಪ್ಪನಿಗೆ ರತ್ನಮ್ಮ ಎಂಬ ಮಗಳು ಕೂಡ ಇರುತ್ತಾಳೆ ಎಂದರೆ ಸರಿ. ನನ್ನ ತಂದೆಗೆ ನಾನು ಮತ್ತು ವೆಂಕಟೇಶ ಗಂಡು ಮಕ್ಕಳು ಎಂದರೆ ಸರಿ. ನನ್ನ ತಾತ ಇದ್ದಾಗ ಮನೆಯ ಯಜಮಾನಿಕೆಯನ್ನು ನನ್ನ ತಾತ ಮಾಡುತ್ತಿದ್ದರು, ಅವರು ತೀರಿಕೊಂಡ ನಂತರ ನನ್ನ ತಂದೆ ಮನೆಯ ಯಜಮಾನಿಕೆಯನ್ನು ಮಾಡಿದ್ದರು. ಮೊದಲು ಕುಟುಂಬದ ಜಮೀನಿನಲ್ಲಿ ನನ್ನ ತಂದೆ ಬೆಳೆ ಇಡುತ್ತಿದ್ದರು, ಅವರ ನಂತರ ನಾನು ಬೆಳೆ ಇಡುತ್ತಿದ್ದೇನೆ. ನಾನು ಜಮೀನಿನ ಮೇಲೆ ಯಾವುದೇ ಸಾಲವನ್ನು ಪಡೆದಿಲ್ಲ. ನನ್ನ ತಂದೆ ಮತ್ತು ಆತನ ಮೂರು ಜನ ಮಕ್ಕಳಾದ ನಮ್ಮ ನಡುವೆ ವಿಭಾಗವಾಗಿ ನಾವು ನಮ್ಮ ನಮ್ಮ ಹಿಸ್ಸೆಗಳಲ್ಲಿ ಸ್ವಾಧೀನ ಹೊಂದಿದ್ದೇವೆ ಎಂದರೆ ವಿಭಾಗವಾಗೇ ಇಲ್ಲ.

5) ನನ್ನ ಮಗ 2 ನೇ ಪ್ರತಿವಾದಿ ಬಸವರಾಜ ಈಗಲೂ ಅವತಿ ಗ್ರಾಮ ಪಂಚಾಯಿತಿಯ ಸದಸ್ಯರಾಗಿದ್ದಾರೆ ಎಂದರೆ ಸರಿ. ಅವತಿ ಗ್ರಾಮದಿಂದ ಗೊಬ್ಬರಗುಂಡಿ ಗ್ರಾಮವು 1 ಕಿ.ಮೀ ಅಂತರದಲ್ಲಿರುತ್ತದೆ. ನಮ್ಮ ಕುಟುಂಬಕ್ಕೆ ಅವತಿ ಗ್ರಾಮದಲ್ಲೂ ಜಮೀನು ಇರುತ್ತದೆ ಎಂದರೆ ಸರಿ. ಅವತಿ ಗ್ರಾಮದಲ್ಲಿ ಇರುವ ನಮ್ಮ ಜಮೀನುಗಳ ಹಾಗೇ ಇರುತ್ತವೆಯೇ? ಎಂದರೆ ಹೌದು, ಹಾಗೇ ಇರುತ್ತವೆ. ನಾನು ಹೇಳುತ್ತೇನೆ ವಿಭಾಗ ಆಗಿರುವುದಿಲ್ಲ. ವಾದಿಗಳ ಜಮೀನು ಮತ್ತು ನನ್ನ ಚಿಕ್ಕಪ್ಪ ಲಕ್ಷ್ಮಯ್ಯನ ಜಮೀನುಗಳು ಗೊಬ್ಬರಗುಂಡಿ ಗ್ರಾಮದಲ್ಲಿ ಇರುತ್ತವೆ ಎಂದರೆ ಸರಿ. ವಾದಿಗೂ ಕೂಡ ಅವತಿ ಗ್ರಾಮದಲ್ಲಿ ಜಮೀನು ಇದೆ ಎಂದರೆ ಸರಿ. ನನ್ನ ತಂದೆ ಮತ್ತು ಆತನ ಸಹೋದರರ ನಡುವೆ ಈಗಾಗಲೇ ಕುಟುಂಬದಲ್ಲಿ ಮೌಖಿಕ ವಿಭಾಗ ನಡೆದಿದೆ ಎಂದರೆ ಸರಿಯಲ್ಲ. ನನ್ನ ತಂದೆ ಪಿಳ್ಳಪ್ಪನು ಯಾವುದೇ ದಾಖಲೆಗಳಿಗೆ ಹೆಬ್ಬೆಟ್ಟಿನ ಗುರುತು ಹಾಕುವ ಮುಂಚೆ ಆ ದಾಖಲೆಗಳಲ್ಲಿರುವ ಸಂಗತಿಗಳನ್ನು ತಿಳಿದುಕೊಂಡ ನಂತರವೇ ಗುರುತು ಹಾಕುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಪಿಳ್ಳಪ್ಪ, ನನ್ನ ಅಣ್ಣ ಕೃಷ್ಣ ಮತ್ತು ನನ್ನ ತಮ್ಮ ವೆಂಕಟೇಶ ಇವರು ಅವತಿ ಗ್ರಾಮದ ಸರ್ವೆ ನಂ.77/3 ರಲ್ಲಿ 2 ಎಕರೆ 25 ಗುಂಟೆ ಭೂ-ಪರಿವರ್ತನೆಯಾದ ಜಮೀನನ್ನು ರಂಕಿ ಎಸ್ಟೇಟ್ ಡೆವೆಲಪರ್ಸ ಇವರಿಗೆ ದಿನಾಂಕಃ 22.02.1997 ರಂದು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ವಾದಿಯು ಸದರಿ ದಾಖಲೆಯನ್ನು ನಿಪಿ-8 ಎಂದು ಹಾಜರು ಮಾಡಿ ಗುರುತಿಸಿಕೊಂಡಿದ್ದಾರೆ ಎಂದರೆ ಸರಿ. ನನ್ನ ಚಿಕ್ಕಪ್ಪ ಲಕ್ಷ್ಮಯ್ಯ ಕೂಡ ಅವತಿ ಗ್ರಾಮದ ಸರ್ವೆ ನಂ.77/8 ರಲ್ಲಿ 2 ಎಕರೆ 25 ಗುಂಟೆ ಭೂ-ಪರಿವರ್ತನೆಯಾದ ಜಮೀನನ್ನು ರಂಕಿ ಎಸ್ಟೇಟ್ ಡೆವೆಲಪರ್ಸ ಇವರಿಗೆ ದಿನಾಂಕಃ 31.01.1997 ರಂದು ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಯು ಸದರಿ ದಾಖಲೆಯನ್ನು ನಿಪಿ-9 ರಂತೆ ಹಾಜರು ಮಾಡಿ ಗುರುತಿಸಿಕೊಂಡಿದ್ದಾರೆ ಎಂದರೆ ಹೌದು, ಆದರೆ ನನಗೆ ನನ್ನ ಚಿಕ್ಕಪ್ಪ ಮಾರಾಟ ಮಾಡಿದ್ದಾರೆಂದು ಗೊತ್ತಿಲ್ಲ. ವಾದಿ ರಾಮಯ್ಯ ಕೂಡ ಸರ್ವೆ ನಂ.77/3 ರಲ್ಲಿ ಭೂ-ಪರಿವರ್ತನೆಯಾದ 2 ಎಕರೆ 26 ಗುಂಟೆ ಜಮೀನನ್ನು ರಂಕಿ ಎಸ್ಟೇಟ್ ಡೆವೆಲಪರ್ಸ ಇವರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ಸದರಿ ಕ್ರಯಪತ್ರಕ್ಕೆ ವಾದಿಯ ಮಗ ನಾಗರಾಜ್ ಕೂಡ ಒಪ್ಪಿಗೆ ಸಹಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಕುಟುಂಬ ಸದಸ್ಯರ ನಡುವೆ ಈಗಾಗಲೇ ಮೌಖಿಕವಾಗಿ ಪಾಲು ವಿಭಾಗ ನಡೆದಿರುವ ಬಗ್ಗೆ ನನಗೆ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೌಖಿಕ ವಿಭಾಗದಲ್ಲಿ ದಾವಾ ಸ್ವತ್ತು ವಾದಿ ರಾಮಯ್ಯನವರ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ವಾದಿ ರಾಮಯ್ಯ ಮತ್ತು ಅವರ ನಂತರ ವಾದಿಯ ವಾರಸುದಾರರೇ ಸ್ವಾಧೀನ ಹೊಂದಿದ್ದಾರೆ ಎಂದರೆ ಇಲ್ಲ, ನಾನೇ ಸ್ವಾಧೀನ ಹೊಂದಿ ಬೋರವೆಲ್ ಗಳನ್ನು ಕೂಡ ಹಾಕಿಸಿದ್ದೇನೆ. ವಾದಿಯ ಕುಟುಂಬ ಸದಸ್ಯರೇ ದಾವಾ ಸ್ವತ್ತಿನಲ್ಲಿ ಬೋರವೆಲ್ ಗಳನ್ನು ಹಾಕಿಸಿದ್ದರೂ ಕೂಡ ನಾನು ಹಾಕಿಸಿದ್ದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸ್ವಾಧೀನದಲ್ಲಿ ಇರುವುದರಿಂದಲೇ ದಾವಾ ಸ್ವತ್ತಿನ ಪಹಣಿಗಳಲ್ಲಿ ವಾದಿ ರಾಮಯ್ಯನ ಹೆಸರೇ ನಮೂದಾಗುತ್ತಿದೆ ಎಂದರೆ ಪಹಣಿ ರಾಮಯ್ಯನ ಹೆಸರಿನಲ್ಲಿರುವ ಬಗ್ಗೆ ನನಗೆ ಗೊತ್ತಿಲ್ಲ, ನಮ್ಮ ತಾತನ ಹೆಸರಿನಲ್ಲಿ ಇದೆ ಎಂದು ನಾನು ಭಾವಿಸಿದ್ದೇನೆ. ಕಂದಾಯ ದಾಖಲೆಗಳು ಕೂಡ ವಾದಿ ರಾಮಯ್ಯ ಮತ್ತು ಅವರ ಮಕ್ಕಳ ಹೆಸರುಗಳಲ್ಲಿ ಇರುತ್ತವೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ವಾದಿ ಮತ್ತು ಅವರ ವಾರಸುದಾರರಿಗೆ ಮಾತ್ರ ದಾವಾ ಸ್ವತ್ತಿನಲ್ಲಿ ಹಕ್ಕು ಬಾಧ್ಯತೆ ಇದ್ದು, ನನಗೆ ಯಾವುದೇ ವಿಧವಾದ ಹಕ್ಕು ಬಾಧ್ಯತೆ ಇಲ್ಲ ಎಂದರೆ ಸರಿಯಲ್ಲ. ಹಲವಾರು ವರ್ಷಗಳಿಂದಲೂ ವಾದಿ ರಾಮಯ್ಯನ ಹೆಸರಿನಲ್ಲೇ ಐ.ಎಲ್. ಮತ್ತು ಆರ್.ಆರ್. ದಾಖಲೆಗಳು ನಮೂದಾಗುತ್ತಿವೆ ಎಂದರೆ ಸೃಷ್ಟಿ ಮಾಡಿದ್ದಾರೆ. ಆ ದಾಖಲೆಗಳನ್ನು ನಿಪಿ-11 ಮತ್ತು ನಿಪಿ-12 ರಂತೆ ವಾದಿ ಹಾಜರು ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-2, ನಿಪಿ-6 ಮತ್ತು ನಿಪಿ-7 ರಂತೆ ವಾದಿಯ ಹೆಸರಿನಲ್ಲಿ ನಮೂದಾಗಿರುವ ಪಹಣಿಗಳನ್ನು ಹಾಜರು ಮಾಡಿದ್ದಾರೆ ಎಂದರೆ ಸೃಷ್ಟಿ ಮಾಡಿದ್ದಾರೆ. ದಾವಾ ಸ್ವತ್ತಿನಲ್ಲಿ ಪ್ರತಿವಾದಿಗಳಾದ ನಮಗೆ ಯಾವುದೇ ವಿಧವಾದ ಹಕ್ಕು ಬಾಧ್ಯತೆಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಈಗ ವಾದಿಯ ವಾರಸುದಾರರೇ ಕ್ಯಾರೆಟ್ ಮತ್ತು ಬಿಟರೂಟ್ ಬೆಳೆಗಳನ್ನು ಬೆಳೆಯುತ್ತಿದ್ದಾರೆ ಎಂದರೆ ಆ ಬೆಳೆಗಳನ್ನು ನಾನೇ ಬೆಳೆಯುತ್ತಿದ್ದೇನೆ. ನಾನು ಈ ದಾವೆ ಹಾಕಿದ ನಂತರ

2 ವರ್ಷಗಳ ಹಿಂದೆ ದಾಳಿಂಬೆ ಬೆಳೆ ಬೆಳೆದಿದ್ದೆ. ನಾನು ದಾವಾ ಸ್ವತ್ತಿನಲ್ಲಿ ದಾಳಿಂಬೆ ಬೆಳೆದ ಬಗ್ಗೆ ದಾಖಲೆಗಳನ್ನು ಇನ್ನು ಮುಂದೆ ಹಾಜರು ಮಾಡುತ್ತೇನೆ. ನಾನು ಯಾವುದೇ ದಾಳಿಂಬೆ ಬೆಳೆ ಬೆಳೆಯದೇ ಇದ್ದರೂ ಬೆಳೆದಿದ್ದೇನೆ ಎಂದು ನನ್ನ ಬಳಿ ದಾಖಲೆಗಳೂ ಕೂಡ ಇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಜಮೀನನ್ನು ಲಪಟಾಯಿಸಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಹೆಂಡತಿ ಮುನಿತಾಯಮ್ಮ ಕೂಡ ಮೃತಪಟ್ಟಿದ್ದಾರೆ ಎಂದರೆ ಸರಿ. ನಾನು ಆಕೆಯ ಶವಸಂಸ್ಕಾರಕ್ಕೆ ಹೋಗಿದ್ದೆ ಎಂದರೆ ಹೋಗಿರಲಿಲ್ಲ. ಆಕೆಯ ಶವಸಂಸ್ಕಾರವನ್ನು ದಾವಾ ಸ್ವತ್ತಿನಲ್ಲಿ ಮಾಡಿ ದಾವಾ ಸ್ವತ್ತಿನಲ್ಲಿ ಆಕೆಗೆ ಸಮಾಧಿ ಕೂಡ ಕಟ್ಟಿದ್ದಾರೆ ಎಂದರೆ ಸರಿಯಲ್ಲ. ಅಕೆಯ ಸಮಾಧಿ ದಾವಾ ಸ್ವತ್ತಿನಲ್ಲಿ ಇರುವ ಬಗ್ಗೆ ವಾದಿಯ ವಾರಸುದಾರರು ಫೋಟೊಗಳು ಮತ್ತು ಸಿ.ಡಿ. ಯನ್ನು ಹಾಜರು ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಉತ್ತರಿಸಿದ ನಂತರ ಅವರ ವಕೀಲರು ಸಾಕ್ಷಿಯು ಆ ರೀತಿ ಹೇಳಿಲ್ಲ ಎಂದು ಮಧ್ಯಪ್ರವೇಶ ಮಾಡಿದ್ದರಿಂದ ಸಾಕ್ಷಿಯು ಸಮಾಧಿ ನಮ್ಮ ಜಮೀನಿನಲ್ಲಿ ಇಲ್ಲ, ಸೃಷ್ಟಿ ಮಾಡಿದ್ದಾರೆ ಎಂದು ಹೇಳಿದ್ದಾರೆ. ಈಗ ತೋರಿಸಿದ ದಾಖಲೆ ಪ್ರಕಾರ ಮುನಿತಾಯಮ್ಮನ ಶವಸಂಸ್ಕಾರವನ್ನು ದಾವಾ ಸ್ವತ್ತಿನಲ್ಲಿ ಮಾಡಿರುವುದನ್ನು ಕಾಣಬಹುದಾಗಿದೆ ಎಂದು ಸೂಚಿಸಿದ್ದು, (ಪ್ರತಿವಾದಿಗಳ ಪರ ವಕೀಲರು ಸಾಕ್ಷಿ ಉತ್ತರ ನೀಡಿದ ನಂತರ ಅವರು ಆ ರೀತಿ ಹೇಳಿಲ್ಲ ಎಂದು ಪದೇ ಪದೇ ಮಧ್ಯಪ್ರವೇಶ ಮಾಡುತ್ತಿದ್ದು, ಪಾಟೀ ಸವಾಲನ್ನು ದಾಖಲಿಸಿಕೊಳ್ಳಲು ತೊಂದರೆ ಮಾಡುತ್ತಿರುವ ಕಾರಣ ಪಾಟೀ ಸವಾಲು ಮುಂದೂಡಲಾಗಿದೆ).

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**